**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.309/13**

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ.ಮಲ್ಲರಾಜು |
| ತಂದೆಯ/ ಗಂಡನ ಹೆಸರು | : | ಸಾವಕಯ್ಯ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಕಿಳು ಮತ್ತು ಮೂಳೆ ಚಿಕಿತ್ಸಾ ತಜ್ಞ |
| ವಾಸ ಸ್ಥಳ | : | ಹೊಳೆನರಸಿಪುರ |

**ದಿನಾಂಕ 27.09.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2005 ರಿಂದ 2017 ರವರೆಗೆ ಹೆಚ್ ಡಿ ಕೋಟೆ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ23.09.2012 ರಂದು 4.15 ಸಮಯದಲ್ಲಿ ಚಾಸಾ 2 ರವರು ಸರಗೂರು ಠಾಣೆಯ ಜಗದೀಶ್ ಶೆಟ್ಟಿ ಎಂಬ ಪೊಲೀಸ್ ಪೇದೆ ಜೊತೆ ಹಲ್ಲೆಯ ಹಿನ್ನೆಲೆ ಚರಿತ್ರೆಯೊಂದಿಗೆ ಆಸ್ಪತ್ರೆಗೆ ಬಂದಿರುತ್ತಾರೆ. ದಿಃ23.09.2012 ಮಧ್ಯಾಹ್ಣ 2.30 ಸಮಯದಲ್ಲಿ ಆರೋಪಿ 1 ರವರು ಮತ್ತು ಇತರರು ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಚಾಸಾ 2 ರವರನ್ನು ಪರಿಕ್ಷಿಸಲಾಗಿ ಅವರಿಗೆ ಬಲ ಮುಂದೋಳು ಬಲ ತೋಡೆಯ ಮಧ್ಯ ಭಾಗ ಹಾಗೂ ಬಲಗಾಲಿನಲ್ಲಿ ಊತದಿಂದ

ಕೂಡಿರುವ ನೋವು. ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆ. ಗಾಯದ ಪ್ರಮಾಣಪತ್ರವನ್ನು ನಿಪಿ 1 ಮತ್ತು ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸಾಮಾನ್ಯವಾಗಿ ಬೈಕಿನಿಂದ ಬಿದ್ದಾಗ ನಿಪಿ 1 ರಲ್ಲಿ ನಮೂದಿಸಿರುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 2 ರವರಿಗೆ ಯಾವುದೇ ರೀತಿ ಗಾಯ ಆಗದೇ ಇದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**